International Journal of Kannada Research 2021; 7(2): 103-109




International Journal of Kannada Research
www.kannadajournal.com

**ISSN: 2454–5813**
IJKR 2021; 7(2): 103-109
© 2021 IJKR
www.kannadajournal.com
Received: 13-02-2021
Accepted: 17-03-2021

**Dr. Padmakar Ashok Kumar**
Department of Kannada, Present Working College, Govt Degree College, Yadagiri, Karnataka, India

**Corresponding Author:**
**Dr. Padmakar Ashok Kumar**
Department of Kannada, Present Working College, Govt Degree College, Yadagiri, Karnataka, India

# ಉರಿಲಿಂಗ ಪೆದ್ದಿಗಳ ಜೀವನಸಾಧನೆ ಮತ್ತು ಪವಾಡಗಳು

**Dr. Padmakar Ashok Kumar**

## ೧. ಪ್ರಸ್ತಾವನೆ:

ಮನುಷ್ಯ ತನ್ನಲ್ಲಿರುವ ಕೆಲವು ವಿಶಿಷ್ಟ ಗುಣಗಳಿಂದಾಗಿ ಹಾಗೂ ತನ್ನಲಿರುವ ವಿಶಿಷ್ಟ ಜ್ಞಾನಶಕ್ತಿಯಿಂದಾಗಿ ಸಕಲ ಪ್ರಾಣಿಗಳಲ್ಲಿ ಶ್ರೇಷ್ಠನೆನಿಸಿಕೊಂಡಿದ್ದಾನೆ. ಮಾನವನಿಗೆ ದೇವರು ಕೊಟ್ಟ ಶಕ್ತಿಯನ್ನು ಸದುಪಯೋಗಪಡಿಸಿಕೊಂಡಾಗ ಮಾನವ ಮಹಾಮಾನವನಾಗಬಲ್ಲನೆಂಬ ಮತ್ತು ಮಹಾತ್ಮನಾಗಬಲ್ಲನೆಂಬುದು ಜಗತ್ತಿಗೆ ಪರಿಚಯಿಸಿಕೊಟ್ಟವರು ಶಿವಶರಣರು. ಸನಾತನ ಧರ್ಮ ಸಂಸ್ಕೃತಿಯಲ್ಲಿ, ಧಾರ್ಮಿಕ ಹಾಗೂ ಸಾಮಾಜಿಕ ವ್ಯವಸ್ಥೆಯಲ್ಲಿ ವೈವಿಧ್ಯಮಯವಾದ ಸಂಪ್ರದಾಯಗಳು ಅನಿಷ್ಟ ಪದ್ಧತಿಗಳು ಮೂಢನಂಬಿಕೆಗಳು ಆಳವಾಗಿ ಬೇರುಬಿಟ್ಟಿರುವದು ಕಂಡುಬರುತ್ತದೆ. ಇಂತಹ ಸಂದರ್ಭದಲ್ಲಿ ಅನಿಷ್ಟ ಪದ್ಧತಿಗಳನ್ನು, ಮೂಢನಂಬಿಕೆ ಗಳನ್ನು ಬೇರುಸಹಿತ ಕಿತ್ತೊಗೆಯಲು ಶ್ರಮಿಸಿದವರು ವಚನ ಸಾಹಿತ್ಯ ಚಳುವಳಿ ಸಂದರ್ಭದಲ್ಲಿ ಉದಯಿಸಿ ಬಂದ ಶರಣರು ಮತ್ತು ದಾರ್ಶನಿಕರು. ಹನ್ನೆರಡನೇ ಶತಮಾನದ ಬಸವಾದಿ ಶರಣರು ಸಮಾಜದಲ್ಲಿ ಮನೆ ಮಾಡಿದ ಜಾತಿಮತಗಳ ಮೇಲು ಕೀಳೆಂಬ ಭಾವನೆಗಳ, ಬಡವ ಬಲ್ಲಿದನೆಂಬ ಅಸಮಾನತೆಯ ಕೃತಕ ಸಂಕೋಲೆಯನ್ನು ಕಡಿದು ಹಾಕಿದರು. ಸಮಾಜದಲ್ಲಿ ಸರ್ವರು ಸಮಾನರಾಗಿ ಕೂಡಿ ಬಾಳುವ ಹಕ್ಕಿದೆ ಎಂದು ಸಾರಿದರು. ವಚನಕಾರರು ಕೈಗೊಂಡದ್ದು ಧಾರ್ಮಿಕ ಮತ್ತು ಸಾಮಾಜಿಕ ಆಂದೋಲನವಾದರೂ ಸಮಾಜ ಜೀವಿಗಳಲ್ಲಿ ಮಾನವೀಯ ಗುಣಗಳನ್ನು ಬೆಳೆಸಿ ಮನುಷ್ಯತ್ವವನ್ನು ಬಿತ್ತುವುದು ಶರಣರ ಪ್ರಮುಖ ಉದ್ದೇಶ ವಾಗಿತ್ತು. ಹಾಗಂತಲೇ ಶರಣರು ತಮ್ಮ ಮನಸನ್ನು ಸಾಕ್ಷಾತ್ಕರಿಸಿಕೊಂಡು, ಮನುಷ್ಯರ ಮನಸು ದೇವರ ಕಡೆಗೆ ತಿರುಗುವಂತೆ ಮಾಡಿದರು. ಅಂತಹ ಮಹಾನ್ ಶಿವಶರಣರಲ್ಲಿ ಶಿವಭಕ್ತ ಶರಣ ಉರಿಲಿಂಗ ಪೆದ್ದಿಗಳು ಒಬ್ಬರು.

## ೨. ಶರಣ ಉರಿಲಿಂಗ ಪೆದ್ದಿಗಳ ಜೀವನ:

ಶರಣ ಉರಿಲಿಂಗ ಪೆದ್ದಿಗಳ ಪೂರ್ವಾಶ್ರಮದ ಜೀವನ ವೃತ್ತಾಂತವನ್ನು ನೋಡಿದಾಗ ಉರಿಲಿಂಗ ಪೆದ್ದಿಗಳು ಕಳ್ಳತನ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರೆಂದು ತಿಳಿದು ಬರುತ್ತದೆ. ಮತ್ತೊಂದು ಕಡೆ ಮೋಳಿಗೆ ಕಾಯಕ ಮಾಡಿ ಬದುಕುತ್ತಿದ್ದ ಕಾಯಕ ಜೀವಿಗಳೆಂದು ಹೇಳುತ್ತಾರೆ. ಅಸ್ಪೃಶ್ಯ ಜಾತಿಗೆ ಸೇರಿದ ಉರಿಲಿಂಗ ಪೆದ್ದಿಗಳ ಕುರಿತು ಅನೇಕ ಕೃತಿಗಳಲ್ಲಿ ಉಲ್ಲೇಖಗಳು ಸಿಗುತ್ತವೆ. ಅವುಗಳಲ್ಲಿ ಪ್ರಮುಖವಾದ ಕೃತಿಯೆಂದರೆ ಅಂಬುಲಿಗೆಯ ಚೆನ್ನಮಲ್ಲೇಶನ' ದೀಪದ ಕಲಿಯರ ಕಾವ್ಯ'. ಈ ಕೃತಿಯಲ್ಲಿ ಶರಣ ಉರಿಲಿಂಗ ಪೆದ್ದಿಗಳ ಕುರಿತು ಮೂಡಿಬಂದ ವಿಚಾರ ಈ ಒಂದು ಪದ್ಯದಲ್ಲಿ ಬಹುಮೌಲಿಕವಾಗಿ ಅಭಿವ್ಯಕ್ತಗೊಂಡಿದೆ.

ಪೆದ್ದಯ್ಯನೆಂಬಾತ ಮುಗ್ಧ ಭಕ್ತನು ದಿನ
ಎದ್ದು ಕಟ್ಟಿಗೆಯ ಮಾರುವ
ಉದ್ಯೋಗ ಮಾಡಿಕೊಂಡಿರ್ದನು ದಿನ ಶಿವ
ಶಬ್ದ ಕೇಳುವ ಮಠದೊಳಗೆ.

ಕವಿ ಚನ್ನಮಲ್ಲೇಶನ ಈ ಉಲ್ಲೇಖ ಗಮನಿಸಿದಾಗ ಉರಿಲಿಂಗ ಪೆದ್ದಿಗಳು ಕಳ್ಳತನ ಮಾಡಿಕೊಂಡು ಬದುಕದೆ ಕಾಡಿನಿಂದ ಕಟ್ಟಿಗೆಹೊರೆ ತಂದು ಮಾರಿ ಉಪಜೀವನ ಸಾಗಿಸುತ್ತಿದ್ದರೆಂಬ ವಿಷಯ ವಿದಿತವಾಗುತ್ತದೆ. ಆದರೆ ಸೂರಯ್ಯನ ಮನೆಯಲ್ಲಿ ಉರಿಲಿಂಗದೇವರು ಶಿವಭಕ್ತ ಸೂರಯ್ಯನಿಗೆ ಲಿಂಗದೀಕ್ಷೆ ನೀಡುವ ಸಂದರ್ಭವನ್ನು ಕದ್ದು ನೋಡಿದನೆನ್ನುವ ಕಾರಣ ಒಂದರಿಂದಲೇ ಉರಿಲಿಂಗ ಪೆದ್ದಿಗಳು ಕಳ್ಳತನ ಮಾಡಿಕೊಂಡು ಬದುಕುತ್ತಿದ್ದರು ಎನ್ನುವುದು ಅಷ್ಟು ಸಮಂಜಸವಾದ ಸಂಗತಿಯಲ್ಲ.

ಜಗತ್ತಿನಲ್ಲಿ ಅನೇಕ ಜನ ಜಡಮತಿಗಳು ಮಹಾತ್ಮರ ಪ್ರಭಾವದಿಂದಾಗಿ ಮನ ಪರಿವರ್ತಿಸಿಕೊಂಡು ಮಹಾ ಪುರುಷರಾಗಿರುವ ಉದಾಹರಣೆಗಳು ಸಾಕಷ್ಟಿವೆ. ರಾಮಾಯಣ ಬರೆದ ವಾಲ್ಮೀಕಿ ಕಳ್ಳತನದಿಂದ ಮನ ಪರಿವರ್ತನೆ ಮಾಡಿಕೊಂಡು ರಾಮಾಯಣ ಬರೆದ ಮೇಧಾವಿಗಳೆನಿಸಿಕೊಂಡದ್ದು. ವಾಲ್ಮೀಕಿಗಳು ತಮ್ಮ ಪೂರ್ವಾಶ್ರಮದಲ್ಲಿ ಕಳ್ಳತನ ಮಾಡಿ ಕೊಂಡು ಬದುಕುತ್ತಿದ್ದರೆಂಬ ಉಲ್ಲೇಖವಿದೆ. ಪರುಷದ ಸಂಗದಿಂದ ಲೋಹ ಚೆನ್ನವಾಗುವಂತೆ, ನಾರದರ ಸಂಗದಿಂದ ವಾಲ್ಮೀಕಿಗಳ ಮನ ಪರಿವರ್ತನೆಯಾದಂತೆ ಗುರು ಉರಿಲಿಂಗ ದೇವರ ಅನುಗ್ರಹದಿಂದ ಉರಿಲಿಂಗ ಪೆದ್ದಿಗಳು ಶಿವಭಕ್ತರಾದರು.

ಗುರು ಉರಿಲಿಂಗ ದೇವರು ನಾಂದೇಡ ಜಿಲ್ಲೆಯ ಆವಸೆ ಕಂದಹಾರ್ ನ ನಲ್ಲೂರಿ ಮಠದ ಪೀಠಾಧಿಪತಿಯಾಗಿದ್ದು ಸತಿಪತಿ ಭಾವದ ಸಾಧಕರಾಗಿದ್ದರು. ಇಂತಹ ಸಾಧಕರ ಪರಮ ಶಿಷ್ಯ ವಚನಕಾರ ಉರಿಲಿಂಗ ಪೆದ್ದಿಗಳು. ಉರಿಲಿಂಗ ಪೆದ್ದಿ ಗಳ ಸತಿ ಕಾಳವ್ವೆ. ಉರಿಲಿಂಗ ಪೆದ್ದಿ ಮತ್ತು ಕಾಳವ್ವೆಯರು ಅಸ್ಪೃಶ್ಯ ಜಾತಿಗೆ ಸೇರಿದವರಾಗಿದ್ದರು. ಒಂದುದಿನ ಗುರು ಉರಿಲಿಂಗ ದೇವರು ನಂದವಾಡದ ಶಿವಭಕ್ತ ಸೂರಯ್ಯನಿಗೆ ಲಿಂಗದೀಕ್ಷೆ ನೀಡಲು ಸೂರಯ್ಯನ ಮನೆಗೆ ಬಂದರು. ಅಂದು ಸೂರಯ್ಯನ ಮನೆಯಲ್ಲಿ ಸಡಗರ ಸಂಭ್ರಮದ ವಾತಾವರಣದಿಂದ ಕೂಡಿತ್ತು. ಸೂರಯ್ಯನ ಮನೆಯ ಸದಸ್ಯ ರೆಲ್ಲ ಮನೆ ಶೃಂಗರಿಸಿ, ರಂಗೋಲಿ ಹಾಕಿ, ತಳಿರು ತೋರಣಗಳಿಂದ ಲಿಂಗ ದೀಕ್ಷೆ ಗಾಗಿ ಮನೆಯನ್ನು ಒಪ್ಪೋರಣವಾಗಿ ಶೃಂಗರಿಸಿದರು. ಶ್ರೀಮಂತನಾದ ಸೂರಯ್ಯ ದೇವರ ಕೋಣೆಯನ್ನು ಒಪ್ಪವಾಗಿ ಅಲಂಕರಿಸಿ, ಗುರು ಉರಿಲಿಂಗ ದೇವರಿಗೆ ಭಕ್ತಿ ಭಾವದಿಂದ ಬರಮಾಡಿಕೊಂಡನು. ಉರಿಲಿಂಗ ದೇವರು ಕಾವಿ ಬಟ್ಟೆಯುಟ್ಟು ಕೊರಳಲ್ಲಿ ರುದ್ರಾಕ್ಷಿ ಧರಿಸಿ ಹಣೆಗೆ ವಿಭೂತಿ ಯನ್ನಿಟ್ಟುಕೊಂಡು ದಿವ್ಯ ಕಳೆಯನ್ನು ಹೊಂದಿದರು. ಸೂರಯ್ಯ ಗುರು ಉರಿಲಿಂಗ ದೇವರ ಪಾದಗಳಿಗೆ ಭಕ್ತಿಯಿಂದ ಕೈಮುಗಿದು ವಂದಿಸಿ, ಗುರುಗಳಿಗೆ ಲಿಂಗ ದೀಕ್ಷೆಗಾಗಿ ಸಿದ್ಧಪಡಿಸಿದ ಗದ್ದುಗೆಯ ಮೇಲೆ ಕುಳ್ಳಿರಿಸಿದನು. ಗುರು ಉರಿಲಿಂಗ ದೇವರು ಭವಿಗಳು ಈ ಲಿಂಗ ದೀಕ್ಷೆಯ ಕಾರ್ಯ ನೋಡಬಾರದೆಂದು ಮನೆಯ ಬಾಗಿಲನ್ನು ಮುಚ್ಚಿಸಿದರು. ಇದೆ ಸಂದರ್ಭದಲ್ಲಿ ಉರಿಲಿಂಗ ಪೆದ್ದಿಗಳು ಲಿಂಗದೀಕ್ಷೆ ಕಾರ್ಯವನ್ನು ಕಣ್ಣಾರೆ ಕಂಡು ಮನತುಂಬಿಕೊಳ್ಳಬೇಕೆಂಬ ಹಂಬಲದಿಂದ ಸೂರಯ್ಯನ ಮನೆಗೆ ಬಂದಾಗ ಮನೆಯ ಬಾಗಿಲು ಮುಚ್ಚಿ ರುವ ಕಾರಣ ಅಥವಾ ಅಂದು ಅಸ್ಪೃಶ್ಯ ಜಾತಿಯವರಿಗೆ ಇಂಥ ಲಿಂಗ ದೀಕ್ಷೆಯ ಸಡಗರ ಸಂಭ್ರಮದ ಕಾರ್ಯಗಳಲ್ಲಿ ಭಾಗವಹಿಸಲು ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಅವಕಾಶ ಇರದ ಕಾರಣ ಅಸ್ಪೃಶ್ಯನಾದ ಉರಿಲಿಂಗ ಪೆದ್ದಿ ಸೂರಯ್ಯನ ಮನೆಯ ಮಾಳಿಗೆ ಏರಿ ಕದ್ದು ಈ ಲಿಂಗ ದೀಕ್ಷೆಯ ಕಾರ್ಯಕ್ರಮ ನೋಡಿರುವುದರಲ್ಲಿ ಆಶ್ಚರ್ಯವೇನಿಲ್ಲ. ಆದರೆ ಗುರು ಉರಿಲಿಂಗ ದೇವರು ಸೂರಯ್ಯನಿಗೆ ನೀಡಿದ ಲಿಂಗ ದೀಕ್ಷೆ ಉರಿಲಿಂಗ ಪೆದ್ದಿಗಳ ಅದರಲ್ಲೂ ಶೂದ್ರ ನೊಬ್ಬನ ಮನಸು ಪರಿವರ್ತನೆಹೊಂದಿ ತಾನು ಸಹ ಲಿಂಗ ದೀಕ್ಷೆ ಪಡೆದು ಶಿವಭಕ್ತನಾಗಬೇಕೆಂಬ ಹಂಬಲವುಂಟಾಗಿರುವುದು ಮಹತ್ವದೆನಿಸುತ್ತದೆ.

ಮನಪರಿವರ್ತನೆಗೊಂಡ ಉರಿಲಿಂಗ ಪೆದ್ದಿಗಳ ಮನಸು ಭಕ್ತಿಯ ಕಡೆಗೆ ತಿರುಗಿತು.ಅಂದೆ ನಿರ್ಧಾರ ಮಾಡಿದ ಉರಿಲಿಂಗ ಪೆದ್ದಿಗಳು ತಮ್ಮ ಮನಸಿನ ಎಲ್ಲ ದುರ್ಗುಣಗಳನ್ನು ಬಿಟ್ಟು ಸತ್ಯ ಶುದ್ಧ ಮನಸಿನಿಂದ ಲಿಂಗ ದೀಕ್ಷೆ ಪಡೆದು ಶಿವಭಕ್ತನಾಗುವ ಹಂಬಲ ವುಳ್ಳವರಾದರು. ಆದರೆ ನಾನು ಕೆಳ ಜಾತಿಗೆ ಸೇರಿರುವುದರಿಂದ ಗುರುಗಳು ನನಗೆ ಲಿಂಗ ದೀಕ್ಷೆ ಮಾಡುವರೇ? ಎನ್ನುವ ಪ್ರಶ್ನೆ ಮನಸಿನಲ್ಲಿ ಕಾಡ ತೊಡಗಿತು. ಅಸ್ಪೃಶ್ಯನಾದ ನಾನು ಲಿಂಗ ದೀಕ್ಷೆ ನೀಡಲು ಕೇಳುವುದಾದರೂ ಹೇಗೆ? ಎನ್ನುವ ಚಿಂತೆ ಹೆಚ್ಚಾಯಿತು. ಏನಾದರೂ ಆಗಲಿ ಗುರುಗಳಿಂದ ಲಿಂಗ ದೀಕ್ಷೆ ಪಡೆಯಲೇಬೇಕೆಂದು ದೃಢ ನಿರ್ಧಾರ ಮಾಡಿದರು. ಗುರುಗಳ ಮನವೊಲಿಸಲು ಗುರು ಮಠಕ್ಕೆ ದಿನನಿತ್ಯ ನಸುಕಿನಲ್ಲಿ ಯಾರಿಗೂ ಕಾಣದಂತೆ ಕಟ್ಟಿಗೆಯ ಹೊರೆತಂದು ಹಾಕುವ ರೂಢಿ ಮಾಡಿಕೊಂಡರು. ಪ್ರತಿದಿನ ಮಠದ ಆವರಣದ ಮೂಲೆಯಲ್ಲಿ ಕಟ್ಟಿಗೆಯ ಹೊರೆಕಂಡ ಗುರುಗಳಿಗೆ ಆಶ್ಚರ್ಯವಾಯಿತು. ಕಟ್ಟಿಗೆ ಹೊರೆ ಹಾಕಿ ಯಾವುದೇ ಪ್ರತಿಫಲ ನಿರೀಕ್ಷಿಸದೆ ಹೋಗುವ ಭಕ್ತ ಯಾರಿರಬೇಕೆಂದು ಗುರುಗಳ ಮನಸು ಯೋಚಿಸುತ್ತಿರುವಾಗ ಒಂದು ದಿನ ಗುರುಗಳು ನಸುಕಿನಲ್ಲಿ ಎದ್ದು ಬಂದು ಯಾರಿಗೂ ಕಾಣದಂತೆ ಮಠದ ಆವರಣದ ಮೂಲೆಯಲ್ಲಿ ನಿಂತುಕೊಂಡರು. ಅದೇ ಸಮಯಕ್ಕೆ ಸರಿಯಾಗಿ ಉರಿಲಿಂಗ ಪೆದ್ದಿಗಳು ಕಟ್ಟಿಗೆಯ ಹೊರೆ ತಂದು ಮಠದಲ್ಲಿ ಹಾಕಿ ಹೊರಡಲು ಸಿದ್ಧರಾದಾಗ ಗುರು ಉರಿಲಿಂಗ ದೇವರು ಪೆದ್ದಯ್ಯಗಳನ್ನು ಕುರಿತು ವಿಚಾರಿಸಿದರು. ಯಾರು ನೀನು ಈ ಕಟ್ಟಿಗೆಯ ಹೊರೆ ತಂದು

ಹಾಕುವ ಉದ್ದೇಶವೇನೆಂದು ಕೇಳಿದರು. ಗುರುಗಳ ಧ್ವನಿ ಕೇಳಿದ ಪೆದ್ದಯ್ಯಗಳು ಭಯ ಭೀತರಾದರು, ಮಾತಾಡದೆ ಮೌನವಾದಾಗ ಗುರುಗಳು ಏರು ದನಿಯಲ್ಲಿ ಗದರಿಸಿದಾಗ ಉರಿಲಿಂಗ ಪೆದ್ದಿಗಳು ನಿಧಾನವಾಗಿ ಸುಧಾರಿಸಿ ಕೊಂಡು ಗುರುಗಳಲ್ಲಿ ತಮ್ಮ ಮನದಾಳದ ಇಂಗಿತವನ್ನು ಅಭಿವ್ಯಕ್ತ ಮಾಡಿದರು. ತನಗೆ ಲಿಂಗದೀಕ್ಷೆ ನೀಡಬೇಕೆಂಬ ಉರಿಲಿಂಗ ಪೆದ್ದಿಗಳ ಮಾತುಕೇಳಿದ ಗುರುಗಳು ಕೋಪದಿಂದ ಕೆಂಡಾಮಂಡಲವಾದರು. ಅಸ್ಪೃಶ್ಯನಾದ ಹೊರ ಕುಲಜನಿಗೆ ಲಿಂಗದೀಕ್ಷೆ ನೀಡಲಾಗದು, ಸುಮ್ಮನೆ ಕಟ್ಟಿಗೆಯ ಹಾಗವನ್ನು ಪಡೆದು ತೊಲಗು ಇಲ್ಲಿಂದ ಎಂದು ಹೇಳಿದರು. ಆದರೆ ಮನಸಿನಲ್ಲಿ ಆವಾಗಲೇ ನಿರ್ಧರಿಸಿದ ಉರಿಲಿಂಗ ಪೆದ್ದಿಗಳು ಗುರುಗಳಿಂದ ಲಿಂಗದೀಕ್ಷೆ ಪಡೆಯಲೇಬೇಕೆಂದು ಹಟಮಾಡತೊಡಗಿದರು. ಲಿಂಗದೀಕ್ಷೆ ನೀಡಲು ಉರಿಲಿಂಗ ಪೆದ್ದಿಗಳು ದಿನ ನಿತ್ಯ ಗುರುಗಳನ್ನು ಕಾಡಲಾರಂಭಿಸಿದರು. ಪೆದ್ದಯ್ಯಗಳ ಕಾಟ ದಿನದಿಂದ ದಿನಕ್ಕೆ ಹೆಚ್ಚುತ್ತಿರಲು, ಗುರುಗಳು ಪೆದ್ದಯ್ಯಗಳ ಕಾಟದಿಂದ ತಪ್ಪಿಸಿಕೊಳ್ಳಲು ದಾರಿ ಕಾಣದೆ ದಾರಿಯಲ್ಲಿ ಬಿದ್ದ ಕಲ್ಲನ್ನೇ ಎತ್ತಿಕೊಂಡು' ಘೇ ದಗಡಿ ಜಾ' ಎಂದು ಉರಿಲಿಂಗ ಪೆದ್ದಿಗಳ ಕಡೆಗೆ ಎಸೆದರು. ಗುರುಗಳು ತಾವು ಕೈಮುಟ್ಟಿ ಎಸೆದ ಕಲ್ಲನ್ನೇ ಲಿಂಗವೆಂದು ಭಾವಿಸಿ ತಮ್ಮ ಎರಡು ಕೈಗಳಿಂದ ಕಣ್ಣಿಗೊತ್ತಿಕೊಂಡರು. ಭಾವತುಂದಿಲರಾಗಿ ಗುರುವಿತ್ತ ಕಲ್ಲೆ ಲಿಂಗವೆಂದು ಪೂಜಿಸಿ ಪುನೀತರಾದರು.

ಉರಿಲಿಂಗ ದೇವರು ಕೊಟ್ಟ ಕಲ್ಲೇ ಲಿಂಗವೆಂದು ಭಾವಿಸಿಕೊಂಡು ಉರಿಲಿಂಗ ಪೆದ್ದಿಗಳು ಭಕ್ತಿಯಿಂದ ಎರಡು ಕೈಗಳಲ್ಲಿ ಹಿಡಿದುಕೊಂಡು ಗುರು ಕೊಟ್ಟ ಕಲ್ಲನ್ನು ತನ್ನ ಕಣ್ಣುಗಳಿಗೊತ್ತಿಕೊಂಡು ಓಡೋಡಿ ಮನೆಗೆ ಬಂದರು. ಮನೆಗೆ ಬಂದವರೆ ತನ್ನ ಹೆಂಡತಿಯನ್ನು ಕರೆದು ಇವತ್ತು ನಮಗೆ ಗುರುಗಳು ಕರುಣೆಯಿಂದ ಲಿಂಗವನ್ನು ಅನುಗ್ರಹಿಸಿದ್ದಾರೆ, ಮನೆ ಸಾರಿಸು ಸ್ನಾನಮಾಡು ಲಿಂಗಪೂಜೆ ಮಾಡಬೇಕೆಂದು ಒಂದೇ ಸಮನೆ ಹೇಳತೊಡಗಿದರು ಪತಿಯ ಮಾತು ಕೇಳಿದ ಕಾಳವ್ವೆಗೆ ತನ್ನ ತಾನೇ ನಂಬದಾದಳು. ತನ್ನ ಗಂಡ ಹೇಳುವುದನ್ನು ಕೇಳಿದ ಕಾಳವ್ವೆ ಆಶ್ಚರ್ಯ ಚಕಿತಳಾದಳು. ಗುರುಗಳು ಅನುಗ್ರಹಿಸಿದ ಇಷ್ಟಲಿಂಗವನ್ನು ತೋರಿಸೆಂದು ತನ್ನ ಗಂಡನಿಗೆ ಕೇಳಿದಳು. ಉರಿಲಿಂಗ ಪೆದ್ದಿಗಳು ತಮ್ಮ ಎರಡೂ ಕೈಯಲ್ಲಿ ಭಕ್ತಿಯಿಂದ ಹಿಡಿದುಕೊಂಡ ಕಲ್ಲನ್ನು ತೋರಿಸಿದರು. ಇಗೋ ಗುರುಗಳು ಕರುಣೆಯಿಂದ ಅನುಗ್ರಹಿಸಿದ ಇಷ್ಟಲಿಂಗವಿದು ಎಂದು ಹೇಳಿದರು. ಗಂಡನ ಕೈಯಲ್ಲಿರುವ ಕಲ್ಲನ್ನು ನೋಡಿದ ಕಾಳವ್ವೆ ಕೆಂಡಾಮಂಡಲವಾಗಿ ತನ್ನ ಗಂಡನಿಗೆ ಪ್ರಶ್ನೆ ಮಾಡುತ್ತಾಳೆ. ಈ ಕಲ್ಲನ್ನು ತರುವುದಕ್ಕಾಗಿನೆನಾ ಹನ್ನೆರಡು ವರ್ಷಗಳ ಕಾಲ ಜೋಡು ಕಟ್ಟಿಗೆಯ ಹೊರೆ ಹೊತ್ತು ಹಾಕಿರುವುದು ಎಂದು ವ್ಯಂಗ್ಯವಾಗಿ ಕೇಳುತ್ತಾಳೆ. ತನ್ನ ಗಂಡನ ಮುಗ್ಧತೆಗೆ ಮನಸಿನಲ್ಲೇ ಮರುಗುತ್ತಾಳೆ. ಅದಕ್ಕೆ ಈ ವಚನವೆ ಸಾಕ್ಷಿ.

ಮೂಢ ಮಾನವನಿದಕೆ ಅಯ್ಯಗೆ ವೋಡಲಾಡುತ್ತ ಹನ್ನೆರಡು ವರುಷವು
ಜೋಡು ಹೊರೆ ಕಟ್ಟಿಗೆಯನು ಹಾಕಿದೆಯೆಂದಳಾ ತರುಣಿ.

ಕಾಳವ್ವೆ ತನ್ನ ಗಂಡನನ್ನು ಕುರಿತು ನೀನೊಬ್ಬ ಶುದ್ಧ ಪೆದ್ದ ಕಲ್ಲು ಎಂದಾದರೂ ಲಿಂಗವಾಗಲು ಸಾಧ್ಯವೇ? ಗುರುಗಳು ಎಂದಾದರೂ ಅಸ್ಪೃಶ್ಯರಿಗೆ ಲಿಂಗದೀಕ್ಷೆ ಅನುಗ್ರಹಿಸುವರೆ? ಎಂದು ಮರು ಪ್ರಶ್ನೆ ಮಾಡುತ್ತಾಳೆ. ತನ್ನ ಗಂಡ ತಂದಿರುವ ಕಲ್ಲನ್ನು ತಿರಸ್ಕರಿಸುತ್ತಾಳೆ. ತನ್ನ ಹೆಂಡತಿ ಗುರು ಅನುಗ್ರಹಿಸಿದ ಲಿಂಗವನ್ನು ಕಲ್ಲೆಂದು ಹೇಳಿದಾಗ ಉರಿಲಿಂಗ ಪೆದ್ದಿಗಳಿಗೆ ಕೋಪ ಬರುತ್ತದೆ. ಆ ಕೋಪದ ಭರದಲ್ಲಿ ಉರಿಲಿಂಗ ಪೆದ್ದಿಗಳು ತನ್ನ ಹೆಂಡತಿ ಆಡಿದ ಮಾತುಗಳಿಂದ ಕುಗ್ಗಿ ಹೋದರು. ತನ್ನ ಹೆಂಡತಿಯ ಬಾಯಿಂದ ಬಂದ ಕಲ್ಲೆಂಬ ಶಬ್ದ ಕೇಳಿದ ತಕ್ಷಣ ಉರಿಲಿಂಗ ಪೆದ್ದಿಗಳು ಈ ಒಂದು ಪದ್ಯದಲ್ಲಿ ಉಲ್ಲೇಖಿಸಿದಂತೆ ಮರು ಪ್ರಶ್ನೆ ಮಾಡುತ್ತಾರೆ.

ಕಲ್ಲುಯೆಂದೆನಬೇಡ ಧೂರ್ತೆಯೆ
ಮಲ್ಲಿಕಾರ್ಜುನ ಮೂರ್ತಿಯೀತನು
ಸಲ್ಲಲಿತ ಶ್ರೀ ಗುರುವಿನಿಂದಲಿ ಬಂದನ ಭವನೆಲೆ

ಗುರುಕೊಟ್ಟ ಲಿಂಗವನ್ನು ಕಲ್ಲೆಂದು ಹೇಳಿದರೆ ನಿನ್ನ ನಾಲಿಗೆ ಸೀಳಿ ಬಿಡುತ್ತೇನೆಂದು ತಮ್ಮ ಮನದಾಳದ ಕೋಪವನ್ನು ಹೊರಹಾಕುತ್ತಾರೆ. ಗುರುಗಳು ನಮ್ಮ ಭಕ್ತಿಗೆ ಮೆಚ್ಚಿ ಅನುಗ್ರಹಿಸಿದ ಲಿಂಗವಿದು. ಮರುಳೆ ಕೇಳು ಕುರಿ ಹಿಕ್ಕಿಯಲ್ಲಿ ಗೊಲ್ಲಾಳನಿಗೆ ಒಲಿಯಲಿಲ್ಲವೆ ಲಿಂಗವಾಗಿ ಎಂದು ತಿಳಿ ಹೇಳಿದರು. ತನ್ನ ಸತಿ ಕಾಳವ್ವೆಗೆ ಸಮಾಧಾನ ಪಡಿಸಿದರು ಉರಿಲಿಂಗ ಪೆದ್ದಿಗಳು.ಸತಿಪತಿಗಳು ಸೇರಿ ಏಕೋ ಭಾವದಿಂದ ಗುರುಕೊಟ್ಟ ಕಲ್ಲನ್ನೇ ಲಿಂಗವೆಂದು ಪೂಜಿಸಿದರು. ಅಂದಿನಿಂದ ಸತಿಪತಿಗಳಿಗೆ ಗುರುಕೊಟ್ಟ ಕಲ್ಲೇ ಇಷ್ಟಲಿಂಗವಾಯಿತು. ಘೇ ದಗಡಿ ಜಾ ಎಂದು ಹೇಳಿದ ಮಾತೇ ಮಂತ್ರವಾಯಿತು.

**೩. ಉರಿಲಿಂಗ ಪೆದ್ದಿಗಳ ಪವಾಡಗಳು:**

ಉರಿಲಿಂಗ ಪೆದ್ದಿ ಮತ್ತು ಸತಿ ಕಾಳವ್ವೆಯರು ಭಾವಶುದ್ಧಿಯಿಂದ ಗುರು ಸೇವೆ ಮಾಡುತ್ತ ಲಿಂಗಾರಾಧನೆಯಲ್ಲಿ ತೊಡಗಿದರು. ಲಿಂಗ ಪೂಜೆ ಮಾಡುತ್ತ ಏಕೋಭಾವದಿಂದ ಬದುಕುತ್ತಿದ್ದರು. ಹೀಗಿರುವಾಗ ನಂದವಾಡಗಿ ಊರಲ್ಲಿ ಮಳೆಯಿಲ್ಲದೆ ಕೆರೆ ಕಟ್ಟೆಗಳೆಲ್ಲ ಬತ್ತಿ ಹೋದವು.ನೀರಿಗಾಗಿ ಜನರು ಕಂಗಾಲಾದರು. ದನ ಕರುಗಳಿಗೆ, ಪ್ರಾಣಿ ಪಕ್ಷಿಗಳಿಗೆ ನೀರಿನ ಬರಬಂದು ಊರಲ್ಲಿ ನೀರಿಗಾಗಿ

ಹಾಹಾಕಾರ ಶುರುವಾಯಿತು. ಜನರ ಸಂಕಷ್ಟವನ್ನರಿತ ಅರಸ, ಊರ ಜನರ ಸಹಕಾರದಿಂದ ಕೆರೆಕಟ್ಟುವ ಕಾರ್ಯ ಶುರುಮಾಡಿದ. ಕೆರೆಕಟ್ಟುವ ಕೆಲಸ ಭರದಿಂದ ಸಾಗಿತು. ಕೆರೆ ಎಷ್ಟೇ ಆಳವಾಗಿ ತೋಡಿದರು ನೀರೇ ಬರಲಿಲ್ಲ. ನೆಲ ಅಗೆಯುತ್ತ ಹೋದಂತೆ ಕೆರೆಯ ಅಂಗಳದ ತುಂಬ ಹಾಸು ಬಂಡೆ ಬಂದು ಹನಿ ನೀರು ಬರಲಿಲ್ಲ. ಚಿಂತಾಕ್ರಾಂತನಾದ ಅರಸ ಅನೇಕ ಜನ ಕಲ್ಲು ಕುಟಿಗರನ್ನು ಕರೆಸಿ ಹಾಸು ಬಂಡೆ ಒಡೆಯುವ ಪ್ರಯತ್ನ ಮಾಡಿದರು ಆದರೆ ಅದು ಸಾಧ್ಯವಾಗಲಿಲ್ಲ. ಬಂಡೆಯನ್ನು ಒಡೆಯಲು ಶ್ರಮಿಸಿದರೂ ಬಂಡೆ ಒಡೆಯಲಿಲ್ಲ. ಕೆರೆಯಲ್ಲಿ ನೀರು ಬರುವ ಯಾವ ಲಕ್ಷಣಗಳು ಕಾಣಲಿಲ್ಲ. ಚಿಂತೆಯಲ್ಲಿ ಮುಳುಗಿ ಹೋದ ಅರಸನಿಗೆ ದಾರಿ ತೋಚಲಿಲ್ಲ. ಕೊನೆಗೆ ಜ್ಯೋತಿಷಿಯೊಬ್ಬರನ್ನು ಕರೆದು ಕೇಳಿದರು. ಆಗ ಆ ಜ್ಯೋತಿಷಿಯು ಗುರು ಉರಿಲಿಂಗ ದೇವರೇ ಇದಕ್ಕೆ ಪರಿಹಾರ ನೀಡುವರು, ಅವರನ್ನೇ ಕಾಣಿರೆಂದು ಹೇಳಿದರು.

ಅರಸ ತನ್ನ ಪರಿವಾರ ಸಮೇತವಾಗಿ ರಾಜಮರ್ಯಾದೆಯೊಂದಿಗೆ ಗುರುಗಳ ಬಳಿಗೆ ಬಂದು ತಮ್ಮ ಮನದಾಳದ ಅಳಲನ್ನು ತೋಡಿಕೊಂಡರು. ಆವಾಗ ಗುರು ಉರಿಲಿಂಗ ದೇವರು ತಮ್ಮ ಶಿಷ್ಯ ಸಮೇತರಾಗಿ ಕೆರೆಯ ಅಂಗಳಕ್ಕೆ ಬಂದರು. ಇಡೀ ಕೆರೆಯ ಅಂಗಳದ ತುಂಬ ಹಾಸಿಕೊಂಡಿದ್ದ ಕಲ್ಲುಬಂಡೆಯನ್ನು ಗಮನಿಸಿದರು, ನಂತರ ಅರಸನನ್ನು ಬಳಿಗೆ ಕರೆದು ಇದು ಮನುಷ್ಯನಿಂದ ಆಗುವಂತಹ ಕೆಲಸವಲ್ಲ. ನೋಡೋಣ ದೇವರಿಷ್ಟವೆಂದು ತಮ್ಮ ಶಿಷ್ಯ ಉರಿಲಿಂಗ ಪೆದ್ದಿಯ ಕಡೆಗೆ ನೋಡಿದರು. ಇದನ್ನು ಗಮನಿಸಿದ ಉರಿಲಿಂಗ ಪೆದ್ದಿಗಳು ಗುರುಗಳ ಆದೇಶ ಪಾಲನೆಗಾಗಿ ಸಿದ್ಧರಾದರು. ಗುರುಗಳು ಮನುಷ್ಯರಿಂದ ಆಗದ ಕೆಲಸವೆಂದು ಹೇಳಿದಾಗ ಅರಸನಿಗೆ ಗಾಬರಿಯಾಯಿತು. ಗುರುಗಳು ಅರಸನ ಮುಖದ ಮೇಲಿನ ಆತಂಕದ ಛಾಯೆಯನ್ನು ಗಮನಿಸಿ, ಅರಸನಿಗೆ ಸಮಾಧಾನ ಹೇಳಿದರು. ಇರಲಿ ತಾವೇನು ಭಯಪಡುವ ಮತ್ತು ಗಾಬರಿಯಾಗುವ ಸಮಸ್ಯೆ ಏನಲ್ಲ ಆ ಭಗವಂತನ ಇಚ್ಛೆಯಂತಾಗುವುದು, ಎಂದು ಹೇಳಿ ತಮ್ಮ ಶಿಷ್ಯ ಉರಿಲಿಂಗ ಪೆದ್ದಿಯ ಕಡೆಗೆ ಅಪ್ಪಣೆ ಅನ್ನುವ ರೀತಿಯಿಂದ ನೋಡಿದರು. ಉರಿಲಿಂಗ ಪೆದ್ದಿಗಳು ಇದು ಗುರುವಾಜ್ಞೆಯೆಂದರಿತು ತಮ್ಮ ಹಸ್ತದಲ್ಲಿನ ಇಷ್ಟಲಿಂಗವನ್ನು ಮನದಲ್ಲಿ ನಮಿಸಿ 'ಫೇ ದಗಡಿ ಜಾ'ಎಂದರು. ತಕ್ಷಣಕ್ಕೆ ಆ ಇಷ್ಟಲಿಂಗ ಕಲ್ಲು ಬಂಡೆಗೆ ತಾಗಿ ಇಡೀ ಹಾಸು ಬಂಡೆಯೆಲ್ಲ ಒಡೆದು ಚೂರಾಗಿ ನೀರಿನ ಝರಿ ಕಾರಂಜಿಯಾಗಿ

ಹರಿದು ಕೆರೆಯು ತುಂಬಿ ಹರಿಯಿತು. ಜನರು ಸಂತೋಷದಿಂದ ಗುರು ಉರಿಲಿಂಗ ದೇವರನ್ನು ಮತ್ತು ಅವರ ಶಿಷ್ಯ ಉರಿಲಿಂಗ ಪೆದ್ದಿಗಳನ್ನು ಮನದುಂಬಿ ಹಾಡಿ ಹೊಗಳಿದರು.

ಉರಿಲಿಂಗ ದೇವರು ಹಿರೇಮಠಕ್ಕೆ ತಮ್ಮ ಉತ್ತರಾಧಿಕಾರಿಯನ್ನು ನೇಮಿಸುವಾಗ ಸಂಪ್ರದಾಯದ ಪ್ರಕಾರ ಸತ್ಕುಲ ಪ್ರಸೂತನು, ಬ್ರಹ್ಮಚಾರಿಯಾದವರನ್ನು ನೇಮಿಸುವುದು ವಾಡಿಕೆ. ಆದರೆ ಗುರು ಉರಿಲಿಂಗ ದೇವರು ಇವುಗಳನ್ನು ಪರಿಗಣಿಸದೆ ಅಸ್ಪೃಶ್ಯನು, ಗೃಹಸ್ಥನೂ ಆದ ಉರಿಲಿಂಗ ಪೆದ್ದಿಗಳನ್ನು ಆಯ್ಕೆ ಮಾಡುತ್ತಾರೆ. ಇದು ಸಂಪ್ರದಾಯವಾದಿಗಳಿಗೆ ಸರಿ ಅನಿಸಲಿಲ್ಲ. ಅನೇಕ ಜನ ಶಿಷ್ಯರು ಗುರುಗಳ ಕಡೆಗೆ ಬಂದು ನಾವು ಸತ್ಕುಲ ಸಂಪನ್ನರು ಜೊತೆಗೆ ಬ್ರಹ್ಮಚಾರಿಗಳು, ಮಠದ ಸಂಪ್ರದಾಯದಂತೆ ನಮ್ಮಲ್ಲಿಯೇ ಯಾರನ್ನಾದರೂ ತಮ್ಮ ಉತ್ತರಾಧಿಕಾರಿಯನ್ನಾಗಿ ನೇಮಿಸಲು ಬೇಡಿಕೊಂಡರು. ಆದರೆ ಗುರು ಉರಿಲಿಂಗ ದೇವರು ಅವರ ಮಾತಿಗೆ ಸಮ್ಮತಿಸಿದೆ ತಮ್ಮ ನಿರ್ಧಾರ ಅಚಲವೆಂದು ಹೇಳಿದರು. ತಮ್ಮ ಮನದಾಳದ ಪಟ್ಟು ಬಿಡದ ಶಿಷ್ಯರು ಗುರುಗಳ ಮೇಲೆ ನಾನಾ ಬಗೆಯ ಒತ್ತಡ ಹೇರಲಾರಂಬಿಸಿದರು. ಆದರು ಗುರುಗಳು ತಮ್ಮ ನಿಲುವು ಬದಲಾಯಿಸಲು ಒಪ್ಪಲಿಲ್ಲ. ಈ ಸಂಪ್ರದಾಯಗಳು ಮಾನವ ನಿರ್ಮಿತವಾದವುಗಳು. ಜಾತಿ ಪದ್ಧತಿ ಹಾಗೂ ಹುಟ್ಟಿನಿಂದಲೇ ವ್ಯಕ್ತಿಯ ಯೋಗ್ಯತೆಯನ್ನು ನಿರ್ಧರಿಸುವುದು ಸರಿಯಲ್ಲವೆಂದು ತಿಳಿಹೇಳಿದರು. ಜಾತಿ ಪದ್ಧತಿಯನ್ನು ಬಸವಾದಿ ಶರಣರು, ದಾರ್ಶನಿಕರು ಬಲವಾಗಿ ಖಂಡಿಸಿದ್ದಾರೆ. ಹಾಗಾಗಿ ತಾವು ಮಠದ ಉತ್ತರಾಧಿಕಾರಿಯಾಗಿ ಅಸ್ಪೃಶ್ಯ ಸ್ತರದಿಂದ ಬಂದ ಉರಿಲಿಂಗ ಪೆದ್ದಿಯನ್ನೆ ನೇಮಿಸುವುದಾಗಿ ಹೇಳಿದರು. ಆವಾಗ ಶಿಷ್ಯರು ಸಹ ತಮ್ಮ ಹಟಬಿಡದೆ ಗುರುಗಳ ಜೊತೆ ವಾದವಿವಾದ ಮಾಡತೊಡಗಿದರು. ಶಿಷ್ಯರ ಒತ್ತಡಕ್ಕೆ ಬೇಸತ್ತ ಗುರುಗಳು ತಮ್ಮ ಶಿಷ್ಯರಲ್ಲಿರುವ ಭಕ್ತಿ ನಿಷ್ಠೆಯನ್ನು ಪರೀಕ್ಷಿಸಲು ಒಂದು ಉಪಾಯ ಮಾಡಿದರು. ಕಾಡಿನಿಂದ ಕಟ್ಟಿಗೆಯ ಹೊರೆಗಳನ್ನು ತರಿಸಿ, ಒಂದೇ ಕಡೆ ಅವುಗಳನ್ನು ಒಟ್ಟಿಸಿ ಬೆಂಕಿ ಹಚ್ಚಿಸಿದರು. ಕಟ್ಟಿಗೆಗಳೆಲ್ಲ ಸುಟ್ಟು ಬೆಂಕಿಯಾದ ಮೇಲೆ ತಮ್ಮ ಶಿಷ್ಯರನ್ನೆಲ್ಲ ಕರೆದು ಯಾರು ಈ ಬೆಂಕಿ ಕೆಂಡದ ಮೇಲೆ ನಡೆಯುತ್ತಾರೋ ಅವರಿಗೆ ಮಠದ ಉತ್ತರಾಧಿಕಾರಿಯನ್ನಾಗಿ ಮಾಡುವುದಾಗಿ ಹೇಳಿದರು. ಗುರುಗಳ ಮಾತು ಕೇಳಿದ ತಕ್ಷಣ ಶಿಷ್ಯರೆಲ್ಲ ಕಕ್ಕಾಬಿಕ್ಕಿಯಾದರು. ಬದುಕಿದರೆ ಸಾಕು ಬಡ ಜೀವ ಎಂದು ಭಾವಿಸಿ ನಾ ಮುಂದು ತಾ ಮುಂದು ಎನ್ನುತ ಎದ್ದು ಬಿದ್ದು ಓಡಿ ಹೋದರು. ಆದರೆ ಉರಿಲಿಂಗ ಪೆದ್ದಿ ನಿಂತ ಜಾಗದಿಂದ ಕದಲಲಿಲ್ಲ. ಗುರುಗಳ ಅಪ್ಪಣೆಗಾಗಿ ಎದುರು ನೋಡುತ್ತಿದ್ದರು. ಉರಿಲಿಂಗ ದೇವರು ಪೆದ್ದಿಗಳ ಮುಖ ನೋಡಿದ ತಕ್ಷಣ ಇಷ್ಟಲಿಂಗವನ್ನು ಕೈಯಲ್ಲಿ ಹಿಡಿದುಕೊಂಡು ಬೆಂಕಿ ಕೆಂಡದ ಮೇಲೆ ಸರಾಗವಾಗಿ ನಡೆದರು. ಉರಿಲಿಂಗ ಪೆದ್ದಿಗಳ ಭಕ್ತಿಗೆ ಮೆಚ್ಚಿದ ಪರಶಿವನು ಪ್ರತ್ಯಕ್ಷನಾಗಿ ಬಂದು ಉರಿಲಿಂಗ ಪೆದ್ದಿಗಳಿಗೆ ರಕ್ಷಿಸಿ ಆಶೀರ್ವಾದ ಮಾಡಿದರು.

ಅಂದಿನ ಕಾಲದಲ್ಲೇ ಗುರು ಉರಿಲಿಂಗ ದೇವರು ಸರ್ವರು ಸಮಾನರು ಅನ್ನುವ ಶರಣರ ವಿಚಾರ ಧಾರೆಯನ್ನು ಕಾರ್ಯ ರೂಪಕ್ಕೆ ತಂದ ಮಹಾ ಮಾನವತಾವಾದಿಯಾಗಿ ಕಂಡು ಬರುತ್ತಾರೆ.

ಒಳ್ಳೆಯ ಪರಿಸರ ಹಾಗೂ ಮಾರ್ಗದರ್ಶನಗಳ ಜೊತೆಗೆ ಶ್ರದ್ಧೆ ನಿಷ್ಠೆಗಳು ಸೇರಿದರೆ ಅಸಾಧ್ಯವು ಸಾಧ್ಯವಾಗಬಲ್ಲುದು ಎಂಬುದಕ್ಕೆ ಉರಿಲಿಂಗ ಪೆದ್ದಿಗಳ ಜೀವನದಲ್ಲಾದ ಬದಲಾವಣೆಯೆ ಜ್ವಲಂತ ನಿದರ್ಶನವಾಗಿದೆ.

**೪. ಉರಿಲಿಂಗ ಪೆದ್ದಿಗಳ ಸಾಧನೆ:**

ವಚನಕಾರ ಉರಿಲಿಂಗ ವೇದ ಆಗಮ, ಉಪನಿಷತ್ತುಗಳನ್ನು, ಪುರಾಣ ಸಂಸ್ಕೃತಿ ಹಾಗೂ ತತ್ವ ಸಿದ್ಧಾಂತಗಳನ್ನು ಆಳವಾಗಿ ಅಧ್ಯಯನ ಮಾಡಿದ ಮಹಾನ್ ವಿದ್ವಾಂಸರು. ಇವರ ವಚನಗಳ ಶೈಲಿ ಚನ್ನಬಸವಣ್ಣನವರ ವಚನಗಳನ್ನು ಹೋಲುತ್ತದೆ. ಚನ್ನಬಸವಣ್ಣನವರಂತೆ ಉರಿಲಿಂಗ ಪೆದ್ದಿಗಳು ಸಹ ವೇದ, ಆಗಮ, ಉಪನಿಷತ್ತುಗಳನ್ನು ಆಧಾರವಾಗಿಟ್ಟುಕೊಂಡು ವಚನಗಳನ್ನು ರಚಿಸಿದ್ದಾರೆ. ಚನ್ನಬಸವಣ್ಣನವರು ತಮ್ಮ ವಚನಗಳಲ್ಲಿ ವೀರಶೈವ ಧರ್ಮದ ತಾತ್ವಿಕಾಂಶಗಳನ್ನು ಹಾಗೂ ತಮ್ಮ ಸಮಕಾಲೀನ ಧಾರ್ಮಿಕ, ಸಾಮಾಜಿಕ ಜನಜೀವನದ ವಿವರಗಳನ್ನು ನೀಡಿರುವಂತೆ ಉರಿಲಿಂಗ ಪೆದ್ದಿಗಳು ಸಹ ತಮ್ಮ ಸಮಕಾಲೀನ ಪರಿಸ್ಥಿತಿಯ ಬಗ್ಗೆ ವಿವರಿಸಿರುವುದು ಕಂಡು ಬರುತ್ತದೆ. ಉರಿಲಿಂಗ ಪೆದ್ದಿಗಳ ಜೀವನವೇ ಒಂದು ಪವಾಡ ಸದೃಶವಾದುದು. ಕೆಳವರ್ಗಕ್ಕೆ ಸೇರಿದ ಹಾಗೂ ಅನಕ್ಷರಸ್ಥರಾದ ಉರಿಲಿಂಗ ಪೆದ್ದಿಗಳ ಬದುಕು, ಗುರು ಉರಿಲಿಂಗ ದೇವರು ನೀಡಿದ ಲಿಂಗದೀಕ್ಷೆಯಿಂದಾಗಿ ಗುರುಕಾರುಣ್ಯ ಹೊಂದಿ ಬಹುದೊಡ್ಡ ತಿರುವನ್ನು ಪಡೆದು ಕೊಂಡಿತು. ಅದಕ್ಕೆ ಅವರ ಈ ಒಂದು ವಚನವೇ ಸಾಕ್ಷಿ.

ಶ್ರೀ ಗುರು ರೂಪಾಗಿ ಬಂದು ದೀಕ್ಷೆಯಂ ಮಾಡಿ
ಶಿವಲಿಂಗವ ಬಿಜಯಂಗೈಸಿ ಕೊಟ್ಟೆರಿ ಜಂಗಮವ ತೋರಿದಿರಿ
ನಿಮ್ಮ ಶಿಶುವೆಂದು ಕರುಣಿಸಿ ಪ್ರಸಾದವನಿಕ್ಕಿ ರಕ್ಷಿಸಿದಿರಿ.

ಗುರು ಉರಿಲಿಂಗ ದೇವರಿಂದ ಇಷ್ಟಲಿಂಗ ಪ್ರಾಪ್ತವಾದ ಸಂದರ್ಭವನ್ನು ಶರಣ ಉರಿಲಿಂಗ ಪೆದ್ದಿಗಳು ಭಾವ ತುಂದಿಲರಾಗಿ ನೆನೆದಿರುವರು. ತನ್ನೊಳಗೆ ಚೈತನ್ಯವನ್ನು ತುಂಬಿದ ಉರಿಲಿಂಗ ದೇವರ ಮಹಿಮೆಯ ಅಸಾಧಾರಣ ಹಿರಿಮೆಯನ್ನು ತಮ್ಮ ಅನೇಕ ವಚನಗಳಲ್ಲಿ ಮನಸಾರೆ ಸ್ಮರಣೆ ಮಾಡಿರುವುದು ಕಂಡು ಬರುತ್ತದೆ. ಗುರು ಅನುಗ್ರಹಿಸಿದ ಕಲ್ಲನ್ನೇ ಲಿಂಗವೆಂದು ಸದ್ಭಾವದಿಂದ ಪೂಜಿಸಿ ನಂಬಿದ್ದರಿಂದ ಅವರ ಭಕ್ತಿ ಸದ್ಭಕ್ತಿ ಯಾಯಿತು. ಅದನ್ನೇ ಅವರು ತಮ್ಮ ಒಂದು ವಚನದಲ್ಲಿ ಈ ರೀತಿಯಿಂದ ಅಭಿವ್ಯಕ್ತಪಡಿಸುತ್ತಾರೆ.

ಸದ್ಗುರುವೇ ಸರ್ವಶ್ರೇಷ್ಠನು
ಸದ್ಗುರುವೇ ಸರ್ವ ಪೂಜ್ಯನು
ಸದ್ಗುರುವೇ ಸರ್ವ ಕಾರಣವಯ್ಯ
ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರ.

ಎಂಬ ವಚನದ ತಾತ್ಪರ್ಯ ಸ್ವತಃ ಉರಿಲಿಂಗ ಪೆದ್ದಿಗಳ ವೈಯಕ್ತಿಕ ಬದುಕಿಗೆ ಬರೆದ ಬಹುದೊಡ್ಡ ಭಾಷೆಯಂತಿದೆ. ಜಗತ್ತಿನಲ್ಲಿ ಜ್ಞಾನಕ್ಕೆ ಉಚ್ಚ ನೀಚರೆಂಬ ಭೇದ ಭಾವವಿಲ್ಲ. ವಯಸ್ಸಿನ ಅಂತರದ ಕಟ್ಟು ಪಾಡುಗಳಿಲ್ಲ. ಮೇಲು ಕೀಳಿನ ಭಾವನೆಗಳಿರುವುದಿಲ್ಲ. ಜ್ಞಾನಾರ್ಜನೆಗೆ ಮುಖ್ಯವಾಗಿ ಬೇಕಾಗಿರುವುದು ಮನುಷ್ಯನಲ್ಲಿರುವ ಶ್ರದ್ಧೆ. ಜ್ಞಾನ ಶ್ರದ್ಧಾವಂತನಿಗೆ ಮಾತ್ರ ಲಭಿಸುತ್ತದೆ. ಈ ಮಾತಿಗೆ ಜೀವಂತ ಉದಾಹರಣೆ ಎಂದರೆ ಶರಣ ಉರಿಲಿಂಗ ಪೆದ್ದಿಗಳು. ಅವರು ಲಿಂಗವಂತರಾದ ಮೇಲೆ ಊಟ ನಿದ್ರೆಗಳ ಪರಿವೆಯಿಲ್ಲದೆ ಜ್ಞಾನದಾಹಿಯಾಗಿ, ಅಧ್ಯಯನ ಶೀಲರಾಗಿ ತಮ್ಮ ಜ್ಞಾನದ ಹಸಿವನ್ನು ಹಿಂಗಿಸಿಕೊಂಡರು. ಜ್ಞಾನ ಉರಿಲಿಂಗ ಪೆದ್ದಿಗಳಿಗೆ ಅನಾಯಸವಾಗಿ ಬಂದುದಲ್ಲ. ಅವರ ಪರಿಶ್ರಮದ ಸತತ ಪ್ರಯತ್ನದ ಫಲವಾಗಿ ಲಭಿಸಿರುವಂತದ್ದು. ಉರಿಲಿಂಗ ಪೆದ್ದಿಗಳ ಲೋಕಜ್ಞಾನ ಬರಿ ಪುಸ್ತಕದಿಂದ ಬಂದುದಲ್ಲ. ತಾರ್ಕಿಕ ಮನೋಭಾವದ ಉರಿಲಿಂಗ ಪೆದ್ದಿಗಳು ತಮ್ಮ ಬದುಕಿನ ಸರ್ವಾಂಗೀಣ ಬೆಳವಣಿಗೆಗೆ ಎಷ್ಟು ಬೇಕೋ ಅಷ್ಟನ್ನೇ ಸ್ವೀಕರಿಸುವುದು ಕಂಡು ಬರುತ್ತದೆ. ಶ್ರೀ ಗುರು ಲಿಂಗದಲ್ಲಿ ಬಸವಣ್ಣನವರನ್ನು, ಬಸವಣ್ಣನವರಲ್ಲಿ ಶ್ರೀ ಗುರು ಲಿಂಗವನ್ನು ಕಂಡೆನೆಂದು ತಮ್ಮ ವಚನದಲ್ಲಿ ಈ ರೀತಿ ಹೇಳಿಕೊಂಡಿದ್ದಾರೆ.

ಸದ್ಭಕ್ತಿ ಬಸವಣ್ಣನಿಗಳವಟ್ಟಿತ್ತು ಬಸವಣ್ಣನೆ ಭಕ್ತನು
ಬಸವಣ್ಣನ ನೆನೆವುದೆ ಭಕ್ತಿಯ ಪಥವು
ಬಸವಣ್ಣನ ನೆನೆವುದೆ ಮುಕ್ತಿಯ ಪಥವು
ಬಸವಣ್ಣನ ನೆನೆದು ಬದುಕಿದೆನಯ್ಯ.

ಎಂದು ಹೇಳುವ ಉರಿಲಿಂಗ ಪೆದ್ದಿಗಳು ಭಕ್ತಿ ಭಂಡಾರಿ ಬಸವಣ್ಣನವರ ಬಗೆಗೆ ಹೊಂದಿರುವ ಭಕ್ತಿಯ ಅನ್ಯೋನ್ಯತೆ ಶೃಂಗ ಪ್ರಾಯವಾಗಿದೆ. ಉರಿಲಿಂಗ ಪೆದ್ದಿಗಳ ವಚನಗಳಲ್ಲಿ ಗುರು ಲಿಂಗ ಜಂಗಮಗಳ ಮಹಿಮೆ ವಿವರಣಾತ್ಮಕವಾಗಿ ಕಂಡು ಬರುತ್ತದೆ. ನಿಷ್ಠಾವಂತ ಗುರುಭಕ್ತರಾದ ಉರಿಲಿಂಗ ಪೆದ್ದಿಗಳು ಶ್ರೀಗುರುವಿನ ಶ್ರೀ ಪಾದ ಧ್ಯಾನವೇ ಯೋಗ್ಯವೆಂದು ಹೇಳುತ್ತಾರೆ. ಜೊತೆಗೆ ಸಮಕಾಲೀನ ಅನೇಕ ಜನ ಶರಣರನ್ನು ಅದರಲ್ಲೂ ವಿಶೇಷವಾಗಿ ಭಕ್ತಿ ಭಂಡಾರಿ ಬಸವಣ್ಣನವರನ್ನು ಮನಸಾಪೂರ್ವಕವಾಗಿ ಸ್ಮರಿಸುತ್ತಾರೆ. ಅಲ್ಲದೇ ಬಸವಣ್ಣನವರನ್ನು ಅನನ್ಯ ಭಕ್ತಿ ಭಾವದಿಂದ ಭಜಿಸುವುದರಿಂದ ಸರ್ವ ಸಿದ್ಧಿ ಲಭಿಸುವುದೆಂದು ಹೇಳುತ್ತಾರೆ.

ವಚನಕಾರ ಉರಿಲಿಂಗ ಪೆದ್ದಿಗಳು ರಚಿಸಿರುವ ವಚನಗಳನ್ನು ಪರಾಮರ್ಶಿಸಿ ನೋಡಿದಾಗ ಅವರ ವಚನಗಳಲ್ಲಿ ಕಂಡು ಬರುವ ಅಚಲ ಗುರು ಭಕ್ತಿಯನ್ನು ಕಾಣಬಹುದು. ಮತ್ತು ಅಪ್ರತಿಮ ಲಿಂಗ

ನಿಷ್ಠೆಯು ಧವಳ ಪ್ರಕಾಶವಾಗಿ ಬೆಳಗುವುದನ್ನು ಮನಗಾಣಬಹುದಾಗಿದೆ. ಮನುಷ್ಯನ ಪರಿಪೂರ್ಣ ಜೀವನಕ್ಕೆ ಶ್ರೀ ಗುರುವಿನ ಕರುಣೆಯೇ ಮೂಲ ಕಾರಣ. ಇದನ್ನು ಮನಗಂಡ ಉರಿಲಿಂಗ ಪೆದ್ದಿಗಳು ಶ್ರೀ ಗುರುವಿನ ಬಗ್ಗೆ ಅಪಾರ ಗೌರವಾದರಗಳನ್ನು ಹೊಂದಿರುವುದು ಈ ವಚನದಿಂದ ಕಂಡು ಬರುತ್ತದೆ.

ಮಹದ್ಗುರುವೆ ಸದ್ಗುರುವೆ ತ್ರಿಜಗದ್ಗುರುವೆ
ಶಿವಂಗೆ ಮಾತೆಯಾದ ಮನೋರಥ ವೀವ ಮಹದ್ಗುರುವೆ
ಶಿವ ಶಿವ ಉಪಮಾತೀತನೆ.

ಉರಿಲಿಂಗ ಪೆದ್ದಿಗಳು ವಿಚಾರವಂತರು, ಪ್ರಗಲ್ಭ ಪಂಡಿತರು, ದಾರ್ಶನಿಕರು ಹಾಗೂ ಅನುಭಾವಿಗಳಾಗಿದ್ದರು. ಸಮಾಜದ ಜನರಲ್ಲಿ ಜಾಗೃತಿ ಮೂಡಿಸಿದರೆ ಖಂಡಿತವಾಗಿಯೂ, ಸ್ವ ಸಾಧನೆಯಿಂದ ಎಂಥ ಸಾಧನೆ ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ಶರಣ ಉರಿಲಿಂಗ ಪೆದ್ದಿಗಳ ಜೀವನವೇ ಒಂದು ನಿದರ್ಶನವಾಗಿದೆ. ಗುರುಕಾರುಣ್ಯ ಹೊಂದಿದ ಉರಿಲಿಂಗ ಪೆದ್ದಿಗಳ ಜೀವನ ಈ ಮೂಲಕ ನಿಶ್ಚಿತ ಗುರಿ ಸಾಧಿಸುವಲ್ಲಿ ಯಶಸ್ವಿಯಾಯಿತು. ಉರಿಲಿಂಗ ಪೆದ್ದಿಗಳು ಆಧ್ಯಾತ್ಮಿಕ ಸಾಧನೆಗಾಗಿ ಸತ್ಯ ಸದಾಚಾರದಿಂದ ಕೂಡಿದ ಶಿವಾನುಭವ ಮಾರ್ಗದ ಮೂಲಕ ಸಾಧಿಸಿ ತೋರಿಸಿರುವುದು ಕಂಡು ಬರುತ್ತದೆ. ಪ್ರತಿಯೊಬ್ಬ ಮನುಷ್ಯ ಹರ ಸಂಧಾನ ವನ್ನು ಪಡೆಯಬೇಕಾದರೆ ಯೋಗ್ಯ ಸಾಧನೆಯಿಂದ ಹರನೊಡನೆ ಸಮರಸ ಹೊಂದಬಲ್ಲನು. ಅಸ್ಪೃಶ್ಯರಾಗಿ ಹುಟ್ಟಿದ ಉರಿಲಿಂಗ ಪೆದ್ದಿಗಳು ಸ್ವ ಸಾಧನೆಯಿಂದ ದಿವ್ಯ ಮಾರ್ಗದಲ್ಲಿ ನಡೆದು ಮೂರುಲೋಕಕ್ಕೆ ಬೋಧೆ ನೀಡುವ ಮಹೋನ್ನತ ಗುರು ಪದವಿಗೇರಿರುವುದು ವಚನಕಾರ ಉರಿಲಿಂಗ ಪೆದ್ದಿಗಳ ಮಹತ್ವದ ಸಾಧನೆಯಾಗಿದೆ. ಉರಿಲಿಂಗ ಪೆದ್ದಿಗಳು ಉರಿಲಿಂಗ ದೇವರಿಂದ ಇಷ್ಟಲಿಂಗ ಪಡೆದ ಸಂದರ್ಭವನ್ನು ಮನದುಂಬಿ ಸ್ಮರಿಸುತ್ತಾರೆ. ಉರಿಲಿಂಗ ಪೆದ್ದಿಗಳ ಹೆಚ್ಚಿನ ವಚನಗಳು ಗುರುಲಿಂಗ ಜಂಗಮಗಳ ಕುರಿತು ಪ್ರತಿಪಾದನೆ ಗೊಂಡಿರುವುದು ಗಮನಿಸಬಹುದಾಗಿದೆ. ಪ್ರಧಾನವಾಗಿ ವೀರಶೈವ ಧರ್ಮದ ಪ್ರತಿಪಾದನೆಗಾಗಿಯೆ ಬರೆದಂತಿದೆ. ಅಲ್ಲದೇ ಭಕ್ತನ ಗುಣ ಲಕ್ಷಣಗಳು, ಗುರುಶಿಷ್ಯರ ಸಂಬಂಧ, ಗುರುವಿನ ಮಹಿಮೆ, ಪ್ರಾಣಲಿಂಗದ ಪೂಜಾಕ್ರಮ, ಷಟಸ್ಥಲಗಳ ಮಹತ್ವ ಹೀಗೆ ವೀರಶೈವ ಧರ್ಮಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಸರಳವಾಗಿ ಹೇಳುವ ಪ್ರಯತ್ನ ಮಾಡಿರುವುದು ಕಂಡು ಬರುತ್ತದೆ. ಶರಣ ಉರಿಲಿಂಗ ಪೆದ್ದಿಗಳ ವಚನಗಳಲ್ಲಿ ಇವುಗಳನ್ನು ಕಾಣಬಹುದಾಗಿದೆ.

ಇಂಥ ಶಿವಶರಣ ಶಿರೋಮಣಿಯಾದ ಉರಿಲಿಂಗ ಪೆದ್ದಿಗಳು ಶಿವಾನುಭವ ಜ್ಞಾನವನ್ನು ಹೊಂದಿ ತನ್ನ ಮೋಳಿಗೆಯ ಕಾಯಕವನ್ನು ನಿಶ್ಚಲ ಮನಸಿನಿಂದ ಕೈಗೊಂಡು ಶರಣ ಸಮೂಹದಲ್ಲಿ ಶ್ರೇಷ್ಠರೆನಿಸಿಕೊಂಡರು. ಅಸ್ಪೃಶ್ಯ ಜಾತಿಯಲ್ಲಿ ಹುಟ್ಟಿ ಅದರಲ್ಲೂ ಸಮಾಜದ ತಿರಸ್ಕಾರಕ್ಕೆ ಒಳಗಾದ ಅಂತ್ಯಜರಾಗಿ, ಅಂದಿನ ಮೇಲ್ವರ್ಗದವರ ಕಪಿಮುಷ್ಠಯಲ್ಲಿ ಸಿಲುಕಿ ನೊಂದ ದಲಿತರ ಬದುಕಿಗೆ ಉರಿಲಿಂಗ ಪೆದ್ದಿಗಳ ಜೀವನ ಕನ್ನಡಿ ಹಿಡಿದಂತಿದೆ. ಉರಿಲಿಂಗ ಪೆದ್ದಿಗಳು ತಮ್ಮ ವೈಯಕ್ತಿಕ ಬದುಕನ್ನು ತಮ್ಮ ವ್ಯಕ್ತಿತ್ವದಲ್ಲಿ ಪಡಿಮೂಡಿಸಿಕೊಂಡು ಬದುಕಿದ ಶರಣ ಜೀವಿಗಳು. ಅವರ ವಿಚಾರ ಧಾರೆಗಳು, ತತ್ವಾದರ್ಶಗಳು ಅವರ ವಚನ ಸುಧೆಯಲ್ಲಿ ಹರಿದು ಬಂದ ರಸಗಂಗೆಯಂತಿವೆ. ಉರಿಲಿಂಗ ಪೆದ್ದಿಗಳ ವ್ರತನಿಷ್ಠೆ ಕಾಯಕ ಶುದ್ಧತೆ ಮತ್ತು ಬದ್ಧತೆಗಳು ಅವರ ಅರಿವು ಆಚಾರಗಳಿಗೆ ಮೆರಗು ತಂದುಕೊಟ್ಟಿವೆ. ತನ್ನ ಅರಿವಿನ ಫಲಶೃತಿಯಲ್ಲಿ ಮೂಡಿದ ಅನುಭವ ಗಳನ್ನು ಸಮರ್ಥವಾಗಿ ಅಭಿವ್ಯಕ್ತಪಡಿಸುವ ಎದೆಗಾರಿಕೆಯನ್ನು ಉರಿಲಿಂಗ ಪೆದ್ದಿಗಳ ವಚನಗಳಲ್ಲಿ ಕಾಣಬಹುದು.

ವಚನಕಾರ ಉರಿಲಿಂಗ ಪೆದ್ದಿಗಳ ದೃಷ್ಟಿಯಲ್ಲಿ ಮೇಲು ಕೀಳಿನ ಭೇದವಿಲ್ಲ. ಜಾತಿ ಹುಟ್ಟಿನಿಂದ ಬರುವುದಿಲ್ಲ, ಅದು ಮನುಷ್ಯನ ಗುಣದಿಂದ ಬರುವುದೆಂಬ ಅಭಿಪ್ರಾಯ ಉರಿಲಿಂಗ ಪೆದ್ದಿಗಳದ್ದಾಗಿದೆ. ಶರಣಸತಿ ಲಿಂಗಪತಿ ಭಾವದಿಂದ ಪರಮಾತ್ಮನನ್ನು ಆರಾಧಿಸಿ ಶಿವ ಕೃಪೆಗೆ ಭಾಜನರಾಗಿರುವುದು ಅವರ ವಚನಗಳಲ್ಲಿ ಕಂಡು ಬರುತ್ತದೆ. ಬೆಂಕಿಯ ಕೆಂಡಕ್ಕೆ ಸಿಕ್ಕವಸ್ತು ತನ್ನ ಪೂರ್ವದ ರೂಪವನ್ನು ಕಳೆದುಕೊಳ್ಳುವಂತೆ, ಸಾಗರ ಸೇರಿದ ನದಿಯು ತನ್ನ ಅಸ್ಥಿತ್ವವನ್ನು ಕಳೆದುಕೊಳ್ಳುವಂತೆ ಶರಣ ಉರಿಲಿಂಗ ಪೆದ್ದಿಗಳು ಅಸ್ಪೃಶ್ಯ ಜಾತಿಯಲ್ಲಿ ಹುಟ್ಟಿದರೂ ಗುರು ಕಾರುಣ್ಯದಿಂದ ಅವರ ಪೂರ್ವಾಶ್ರಮದ ಅಸ್ಪೃಶ್ಯತೆ ನಿವಾರಣೆಯಾಗಿ ಶಿವಲಿಂಗ ಸ್ವರೂಪಿಗಳಾದರು. ಅದಕ್ಕಾಗಿಯೇ ಉರಿಲಿಂಗ ಪೆದ್ದಿಗಳು ಇಷ್ಟಲಿಂಗವನ್ನು ಕುರಿತು ತಮ್ಮ ಒಂದು ವಚನದಲ್ಲಿ ಈ ರೀತಿಯಾಗಿ ಹೇಳುತ್ತಾರೆ.

ನಿತ್ಯ ನಿರಂಜನ ಪರಂಜೋತಿರ್ಲಿಂಗವು
ಪ್ರತ್ಯಕ್ಷವಾಗಿ ಎನ್ನ ಕರಸ್ಥಲಕ್ಕೆ ಬಂದಿರಲು
ಮತ್ತೊಂದ ನೆನೆದು ಬದುಕಿಹನೆಂಬುದು ಅಜ್ಞಾನ ನೋಡ.

ಉರಿಲಿಂಗ ಪೆದ್ದಿಗಳ ವಚನಗಳನ್ನು ಅವಲೋಕನ ಮಾಡಿ ನೋಡಿದಾಗ ಉರಿಲಿಂಗ ಪೆದ್ದಿಗಳಲ್ಲಿ ಮೂಡಿದ ಅಚಲವಾದ ಗುರು ಭಕ್ತಿ ಹಾಗೂ ಅಪ್ರತಿಮವಾದ ಲಿಂಗ ನಿಷ್ಠೆಯು ಮೇಳೈಸಿ ಬಂದಿರುವುದು ಕಂಡು ಬರುತ್ತದೆ. ಒಲಿದ ಲಿಂಗದಲ್ಲಿ ವಿಶ್ವಾಸವಿರಿಸದೆ ಅನ್ಯ ದೈವದ ಕಡೆಗೆ ಮನಸೆಳೆವುದು ಅಜ್ಞಾನಿಗಳು ಹಿಡಿದ ಅಧರ್ಮದ ಮಾರ್ಗವೆಂದು ಬಹು ಮಾರ್ಮಿಕವಾಗಿ ಹೇಳಿದ್ದಾರೆ. ಲಿಂಗವಂತರು ಅನ್ಯ ದೈವಗಳ ಆರಾಧನೆ ಮಾಡಬಾರದೆಂಬ ನಿಲುವು ಉರಿಲಿಂಗ ಪೆದ್ದಿಗಳದ್ದಾಗಿದೆ. ಒಟ್ಟನಲ್ಲಿ ಉರಿಲಿಂಗ ಪೆದ್ದಿಗಳು ತಮ್ಮ ವಚನಗಳ ಮೂಲಕ ವೀರಶೈವ ಧರ್ಮದ ಪ್ರಮುಖ

ಅಂಶಗಳನ್ನು, ತತ್ವಾದರ್ಶಗಳನ್ನು, ಹಾಗೂ ನಿಜಾಚರಣೆಗಳನ್ನು ಅನೇಕ ಪ್ರಮಾಣ ಮತ್ತು ಆಧಾರಗಳಿಂದ ಪಾಂಡಿತ್ಯ ಪೂರ್ಣವಾಗಿ ವಿವೇಚಿಸಿ ಜನ ಮೆಚ್ಚುವಂತೆ ಅತ್ಯಂತ ಸಮರ್ಥವಾಗಿ ಪ್ರತಿಪಾದಿಸಿದ್ದಾರೆ.

**೫. ಸಮಾರೋಪ:**

ಹನ್ನೆರಡನೇ ಶತಮಾನದಲ್ಲಿ ಜರುಗಿದ ವರ್ಗ ಮತ್ತು ಜಾತಿ ಸಂಘರ್ಷ, ಮೇಲು ಕೀಳಿನ ಭೇದ, ಲಿಂಗ ತಾರತಮ್ಯ ಮುಂತಾದವುಗಳನ್ನು ಹೋಗಲಾಡಸಲು ಮತ್ತು ಸಮಾಜದಲ್ಲಿ ಸಮಾನತೆ ತರುವ ಜ್ಯಾತ್ಯಾತೀತ ಮನೋಧರ್ಮ ವಚನಕಾರರದ್ದಾಗಿತ್ತು. ವಚನಕಾರ ಉರಿಲಿಂಗ ಪೆದ್ದಿಗಳ ಪ್ರಾರಂಭದ ಸ್ಥಿತಿಯಾದ ಹೃದಯ ತಳಮಳದಿಂದ ಹಿಡಿದು ಗುರುಗಳಿಂದ ಲಿಂಗದೀಕ್ಷೆ ಪಡೆದು ಶರಣ ಸ್ಥಿತಿಯವರೆಗೆ ಅವರ ಸಾಧನೆಯ ವಿವಿಧ ಮಜಲುಗಳು ಉರಿಲಿಂಗ ಪೆದ್ದಿಗಳ ವಚನಗಳಲ್ಲಿ ಯಥಾವತ್ತಾಗಿ ಮೂಡಿರುವುದರಿಂದ ಅವರ ವಚನಗಳು ಸಾಧಕರಿಗೆ ಸಾಧನೆಯ ಮಾರ್ಗವಾಗಿ ದಾರಿ ತೋರುತ್ತವೆ. ಉರಿಲಿಂಗ ಪೆದ್ದಿಗಳ ವಚನಗಳಲ್ಲಿ ಧಾರ್ಮಿಕ ಧೋರಣೆ, ನೀತಿ ನಿರೂಪಣೆ ಹಾಗೂ ಸಾಮಾಜಿಕ ಪ್ರಜ್ಞೆಗಳೆಲ್ಲ ಮೂಡಿ ಬಂದರು ಉರಿಲಿಂಗ ಪೆದ್ದಿಗಳು ಗುರುಲಿಂಗ ಜಂಗಮಕ್ಕೆ ಆದ್ಯತೆ ನೀಡಿರುವುದು ಕಂಡು ಬರುತ್ತದೆ. ಅಂದಿನ ಸಮಾಜದಲ್ಲಿ ಮನೆಮಾಡಿದ ಅಂಧಾನುಕರಣೆ, ಮೂಢ ನಂಬಿಕೆಗಳ ಆಚರಣೆಗಳನ್ನು ವಿರೋಧಿಸಿದರು. ಗೊಡ್ಡು ಸಂಪ್ರದಾಯಗಳ ಮೂಲಕ ಮುಗ್ಧ ಜನರ ಮನದಲ್ಲಿನ ಜಿಡ್ಡುಗಟ್ಟಿದ ವ್ಯವಸ್ಥೆಯನ್ನು ಉರಿಲಿಂಗ ಪೆದ್ದಿಗಳು ತಮ್ಮ ವಚನಗಳ ಮೂಲಕ ಹೋಗಲಾಡಿಸಿ ತಿದ್ದಲು ಪ್ರಯತ್ನಿಸಿರುವುದು ಕಾಣಬಹುದಾಗಿದೆ. ಉರಿಲಿಂಗ ಪೆದ್ದಿಗಳು ತಾವು ಅನುಭವಿಸಿದ ಹಾಗೂ ಕಂಡುಕೊಂಡ ಜೀವನದ ಸತ್ಯ ಸಂಗತಿಗಳನ್ನು ತಾವೇ ಸ್ವತಃ ಅನುಭವಿಸಿ ಸುಖ ಪಡುವ ಸ್ವಾರ್ಥಿಗಳಾಗದೆ, ಪರರ ಹಿತಕ್ಕಾಗಿ ಶ್ರಮಿಸಿದ ನಿಸ್ವಾರ್ಥ ಶರಣ ಜೀವಿಗಳು.

ಪರಮಾತ್ಮನ ಸಾಕ್ಷಾತ್ಕಾರಕ್ಕೆ ಸಾಧನ ಮಾರ್ಗಗಳು ಬೇರೆ ಬೇರೆಯಾರಾದರೂ, ವಚನಕಾರ ಉರಿಲಿಂಗ ಪೆದ್ದಿಗಳು ಆರಿಸಿ ಕೊಂಡದ್ದು ಇಷ್ಟಲಿಂಗದ ಆರಾಧನಾ ಮಾರ್ಗ. ವಚನಕಾರರಲ್ಲಿ ವಿವಿಧ ಮನೋಧರ್ಮದ ಸಾಧಕರಿದ್ದಾರೆ. ಬಸವಣ್ಣ ಭಕ್ತಿ ಭಂಡಾರಿಯಾದರೆ, ಅಲ್ಲಮ ಪ್ರಭುಗಳು ವೈರಾಗ್ಯ ನಿಧಿಯಾಗಿ ಕಂಡು ಬರುತ್ತಾರೆ. ಸಿದ್ಧರಾಮ ಕರ್ಮಯೋಗಿಯಾದರೆ ಚನ್ನಬಸವಣ್ಣ ಜ್ಞಾನದ ಬೆಳಕಾಗಿ ಕಂಡು ಬಂದಂತೆ ಉರಿಲಿಂಗ ಪೆದ್ದಿಗಳು ಗುರು ಲಿಂಗ ಜಂಗಮಗಳ ಆರಾಧಕರಾಗಿ ಕಂಡು ಬರುತ್ತಾರೆ.

ಶರಣ ಉರಿಲಿಂಗ ಪೆದ್ದಿಗಳ ಜೀವನ ಬಹುಮುಖ ಪ್ರತಿಭೆಯಿಂದ ಕೂಡಿದೆ. ಒಂದುಕಡೆ ಅಂತರಂಗದ ಅರಾಧಕರಾದರೆ ಮತ್ತೊಂದು ಕಡೆ ಸಮಾಜ ಸುಧಾರಕರಾಗಿ, ಧರ್ಮದ ಬೆಳಕನ್ನು ಹೊತ್ತ ದೀವಟಿಗರಾಗಿ ಕಂಡು ಬರುತ್ತಾರೆ. ಉರಿಲಿಂಗ ಪೆದ್ದಿಗಳು ತಮ್ಮ ನಿತ್ಯ ಜೀವನದ ಕಾಯಕವನ್ನು ನಿಷ್ಠಾ ಭಾವದಿಂದ ಮಾಡುವ ಕುಶಲ ಮತಿಗಳು. ಉರಿಲಿಂಗ ಪೆದ್ದಿಗಳು ಬದುಕನ್ನು ತೆರೆದ ಭಾವದಿಂದ ನೋಡಿದವರು. ಲೋಕದ ಕಷ್ಟ ಕಾರ್ಪಣ್ಯಗಳನ್ನು, ಸ್ತುತಿ ನಿಂದೆಗಳನ್ನು ಸಮನಾಗಿ ಬರಮಾಡಿಕೊಂಡವರು. ಜೀವನದ ನೂರಾರು ಅನುಭವಗಳನ್ನು ಪಡೆದ ಉರಿಲಿಂಗ ಪೆದ್ದಿಗಳ ಚೇತನ ಶಕ್ತಿ ಶ್ರೀಮಂತವಾಗಿದೆ. ಗಗನಗಾಮಿಯಾಗಿ ಮೇಲೇರಿದೆ. ಅದರ ಪ್ರಭಾವವನ್ನು ಅವರ ವಚನಗಳಲ್ಲಿ ಮೂಡಿ ಬಂದಿರುವದು ಕಂಡು ಬರುತ್ತದೆ. ಒಟ್ಟಿನಲ್ಲಿ ಉರಿಲಿಂಗ ಪೆದ್ದಿಗಳ ವಚನಗಳ ಬೆಳಕಿನಲ್ಲಿ ಹೊರಟರೆ ನಮ್ಮ ಬದುಕು ಹಸನಾಗಿ, ಸಾರ್ಥಕವಾಗುವುದರಲ್ಲಿ ಸಂದೇಹವಿಲ್ಲ.

ಡಾ. ಪದ್ಮಾಕರ ಅಶೋಕ ಕುಮಾರ ಎಸ್ ಮಟ್ಟಿ.
ಪ್ರಾಧ್ಯಾಪಕರು, ಸರಕಾರಿ ಪದವಿ ಕಾಲೇಜು ಯಾದಗಿರಿ.

**ಆಧಾರ ಗ್ರಂಥಗಳು**

1. ಉರಿಲಿಂಗ ಪೆದ್ದಿಗಳ ವಚನಗಳು
   ಡಾ. ಎಚ್. ಪಿ. ಮಲ್ಲೇದೇವರು.
2. ದೀಪದ ಕಲಿಯರ ಕಾವ್ಯ
   ಡಾ. ಎಸ್. ವಿದ್ಯಾಶಂಕರ
3. ಕನ್ನಡದಲ್ಲಿ ಅನುಭಾವ ಸಾಹಿತ್ಯ.
   ಡಾ. ಎಂ. ಎಸ್. ಪಾಟೀಲ್
   ಡಾ. ಡಿ. ಬಿ.ನಾಯಕ.
4. ದಲಿತ ವರ್ಗದ ಶರಣರು
   ಡಾ.ಮ.ನ. ಜವರಯ್ಯ
5. ವಚನಕಾರ ಉರಿಲಿಂಗ ಪೆದ್ದಿ.
   ಡಾ. ಪಿ. ಅಶೋಕ ಕುಮಾರ ಮಟ್ಟಿ.
6. ಶರಣರ ಅನುಭಾವ ಸಾಹಿತ್ಯ.
   ಡಾ. ಎಚ್. ತಿಪ್ಪೇರುದ್ರ ಸ್ವಾಮಿ.
7. ಶರಣರ ತತ್ವ ಚಿಂತನ.
   ಎ. ಎಲ್. ಶಿವರುದ್ರಪ್ಪ.
8. ವಚನಕಾರರು ಮತ್ತು ಶಬ್ದ ಕಲ್ಪ.
   ಅ. ರಾ. ಮಿತ್ರ.
9. ಕಲಬುರ್ಗಿ ಜಿಲ್ಲೆಯ ತತ್ವಪದಕಾರರು.
   ಡಾ. ವಿ. ಜಿ. ಪೂಜಾರ.
10. ಇಪ್ಪತ್ತೈದು ವಚನಕಾರ್ತಿಯರ
    ಜೀವನ ಹಾಗೂ ಸಾಧನೆ.
    ಶ್ರೀಮತಿ ಜಗದಂಬಾ ಮಲ್ಲೇದೇವರು.